ಶ್ರೀ ಕೆ. ಕುಶಾಲ: ತಡೆಯಾಜ್ಞೆಯನ್ನು ತೆರವು ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಎಂಡೋಮೆಂಟ್ ಕಮೀಷನರ್‌ರವರು ಸರ್ಕಾರಿ ವಕೀಲರನ್ನು ಸಂಪರ್ಕಮಾಡಿ ಆದಷ್ಟು ಬೇಗ ತಡೆಯಾಜ್ಞೆಯನ್ನು ವೆಕೇಟ್ ಮಾಡಿಸುವುದಕ್ಕೆ ಹೇಳಿದ್ದಾರೆ ನಿನ್ನೆ ಕೂಡ ಇದರ ಬಗ್ಗೆ ಅವರನ್ನು ಕರೆಸಿ ಮಾತನಾಡಿದ್ದೇನೆ.

ಕಂದಾಯ ಇಲಾಖೆಯ ನಾಡ ಕಛೇರಿಗಳನ್ನು ಮುಚ್ಚುವುದು

1299 - ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಂದಾಯ ಇಲಾಖೆಯಲ್ಲಿ ಜಾರಿಗೊಳಿಸಿರುವ ನಾಡ ಕಛೇರಿಗಳು ನಿರೀಕ್ಷಿಸಿದಷ್ಟು ಸಫಲವಾಗದೇ ಇರುವುದನ್ನು ಸರ್ಕಾರ ಗಮನಿಸಿದೆಯೆ?*

ಆ) *ರಾಜ್ಯದಲ್ಲಿ ನಾಡ ಕಛೇರಿಗಳನ್ನು ರದ್ದುಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುತ್ತಿದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಮೊದಲಿನ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದಾರೆ, 2ನೇ ಪ್ರಶ್ನೆಗೆ ಪರಿಶೀಲಿಸುತ್ತೇನೆಂದು ಹೇಳಿದ್ದಾರೆ. ಅದರಲ್ಲಿ ನ್ಯೂನತೆ ಇದೆ ಎಂದು ಸರ್ಕಾರ ಒಪ್ಪಿಕೊಂಡಿರುವಾಗ ಪರಿಶೀಲನೆ ಮಾಡತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ತಾವು ದಯಮಾಡಿ ಈಗಾಗಲೆ ಅಧ್ಯಕ್ಷರು ಕೊಟ್ಟಿರುವ ಅಪ್ಪಣೆಯ ರೀತಿ ಯಾವತ್ತು ಪರಿಶೀಲನೆ ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳತಕ್ಕದ್ದು ತಮ್ಮ ಕರ್ತವ್ಯ ಮತ್ತು ಸರ್ಕಾರದ ಕರ್ತವ್ಯವೂ ಹೌದು. ಈ ನಾಡ ಕಛೇರಿಗಳನ್ನು ಮಾಡಿದ ಮೂಲ ಉದ್ದೇಶವೇನೆಂದರೆ, ಜನರು ತಾಲ್ಲೂಕಿಗೆ ಅಲೆಯಬಾರದೆಂದು ಹೋಬಳಿಯಲ್ಲಿ ಮಾಡಿದರೆ, ಜನಗಳಿಗೆ ಅನುಕೂಲವಾಗುತ್ತದೆ, ಸೌಕರ್ಯವಾಗುತ್ತದೆ, ಮತ್ತು ಅದರ ಜೊತೆಗೆ 50 ರೂಪಾಯಿ ಖರ್ಚಾಗುವ ಕಡೆ ಇನ್ನೂ ಕಡಿಮೆ ಖರ್ಚಾಗಲಿ ಎಂಬ ಉದ್ದೇಶವನ್ನು ಇಟ್ಟುಕೊಂಡು ಮಾಡಲಾಗಿತ್ತು. ಆದರೆ ಇಂದು ಅದಕ್ಕೆ ವ್ಯತಿರಿಕ್ತವಾಗಿದೆ. ಈ ನಾಡ ಕಛೇರಿಯಿಂದ ಒಂದು ಪಹಣಿ ತರಬೇಕಾದರೆ ಹಿಂದೆ 50 ರೂಪಾಯಿ ಖರ್ಚು ಆಗುತ್ತಿದ್ದದ್ದು ಇವತ್ತು 100 ರೂಪಾಯಿ ಖರ್ಚಾಗುತ್ತಿದೆ. ಲಂಚಗುಳಿತನ ನಿಯಂತ್ರಣವಾಗಿಲ್ಲ. ಅಲ್ಲಿ ನಡೆಯುತ್ತಿರುವ ವ್ಯವಹಾರವನ್ನು ಹೇಳಬೇಕೆಂದರೆ, ಅದು ನಾಚಿಕೆ ಪಡುವ ಮಟ್ಟಕೆ ಹೋಗಿದೆ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತೇನೆ. ತಾವು ಧೈರ್ಯವಿರುವ ಯುವಕ ಮಂತ್ರಿಗಳಾಗಿದ್ದೀರಿ, ಈ ನಾಡ ಕಛೇರಿಗಳನ್ನು ನಿರ್ದಿಷ್ಟವಾಗಿ ಇವತ್ತು ರದ್ದು ಮಾಡಿದ್ದೇನೆ ಎಂಬ ಮಾತನ್ನು ಹೇಳಬೇಕು ಇದರಿಂದ ಹಣವು ಉಳಿಯುತ್ತದೆ, ದಯಮಾಡಿ ನಿರ್ದಿಷ್ಟವಾಗಿ ಇವತ್ತೇ ಹೇಳಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಡೀಸೆಂಟ್ರಲೈಜೆಷನ್ ಮಾಡಬೇಕೆಂದು ನಾಡಕಛೇರಿಗಳನ್ನು ಪ್ರತಿಯೊಂದು ಹೋಬಳಿಯಲ್ಲಿ ಮಾಡಿದ್ದೇವೆ. ಮತ್ತು ಅಲ್ಲಿ ಪಹಣಿ ಪತ್ರ, ಜಾತಿಪತ್ರ, ಆದಾಯ ಪತ್ರ, ವೃದ್ಧಾಪ್ಯವೇತನ ಮುಂತಾದುವುಗಳನ್ನು ಅಲ್ಲೇ ಸೆಟಲ್ ಮಾಡಿ ಕೊಡಬೇಕೆಂಬ ದೃಷ್ಟಿಯಿಂದ ಈ ನಾಡಕಛೇರಿಗಳು ಸ್ಥಾಪನೆಯಾದವು. ಆದರೆ ಅವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿಲ್ಲ.

ಆದ್ದರಿಂದ ಬಹಳ ಪರಿಣಾಮಕಾರಿಯಾಗಿ ಈ ಕೆಲಸ ಅನೇಕ ಕಡೆ ನಡೆದಿಲ್ಲ ಎನ್ನುತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಆದರೆ ಅನೇಕ ಜನ ಲೆಜಿಸ್‌ಲೇಟರ್ಸ್ ನನಗೆ ಪತ್ರವನ್ನು ಬರೆದು ನಾಡ ಕಛೇರಿಗಳು ಕೆಲವು ಕಡೆ ಉತ್ತಮವಾಗಿ ಕೆಲಸ ಮಾಡುತ್ತಿವೆ, ಆದುದರಿಂದ ಅವುಗಳನ್ನು ಮುಂದುವರಿಸಿ ಎಂದು ತಿಳಿಸಿದ್ದಾರೆ. ನನಗೆ ನೂರಕ್ಕಿಂತ ಹೆಚ್ಚು ಲೆಜಿಸ್‌ಲೇಟರ್ಸ್ ಕಾಗದ ಬರೆದಿದ್ದಾರೆ. ಬಹುಶಃ ಸೈಕ್ಲೊಸ್ಟೇಲ್ ಕಾಪಿ ಮಾಡಿ ಕಳಿಸಿದ್ದರು, ಎಲ್ಲರೂ ಸಹಿ ಮಾಡಿದ ಹಾಗೆ ಕಾಣುತ್ತದೆ. ಇದನ್ನು ಕಂಟಿನ್ಯೂ ಮಾಡಿ ಎಂದು ಕಳಿಸಿದ್ದಾರೆ. ಕೆಲವರು ಇದನ್ನು ನಿಲ್ಲಿಸಿ ಎಂದು ಹೇಳುತ್ತಾರೆ ಮತ್ತೆ ಕೆಲವರು ಇದನ್ನು ಮುಂದುವರೆಸಿ ಎಂದು ಹೇಳಿದ್ದಾರೆ, ನಮ್ಮ ಇಲಾಖೆಯ ವರದಿಗಳು ಬಂದಿದೆ.

ಅಧ್ಯಕ್ಷರು : ಸೈಕ್ಲೊಸ್ಟೇಲ್ ಮಾಡಿದ್ದಾರೆ ಎಂದ ಮೇಲೆ ಸ್ವಲ್ಪ ಅನುಮಾನ ಬರುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಿರ್ದಿಷ್ಟವಾಗಿ ಕೊಡಗು ಮತ್ತು ಮಲೆನಾಡಿನ ಪ್ರದೇಶದಲ್ಲಿ ಈ ನಾಡ ಕಛೇರಿಗಳು ಸ್ವಲ್ಪಮಟ್ಟಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಎಂಬ ವರದಿ ಇದ್ದ ಕಾರಣ ಆ ಒಂದು ಬೇಸಿಸ್ ಮೇಲೆ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರು ಇದಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರು; ಏಕೆಂದರೆ, ಅವರ ವಿರಿಯಾದಲ್ಲಿ ಈ ನಾಡಕಛೇರಿಗಳು ಚೆನ್ನಾಗಿ ಕೆಲಸ ಮಾಡುತ್ತಿತ್ತು ಮತ್ತು ಅದಕ್ಕೆ ಸಂಪೂರ್ಣವಾದ ಅಧಿಕಾರ ಇತ್ತು. ಆದರೆ ಈಗ ನಾವು ಈ ನಾಡ ಕಛೇರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ. ಆದುದರಿಂದ ಅವು ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಈ ನಿಟ್ಟಿನಲ್ಲಿ ಸದ್ಯಕ್ಕೆ ಮಾರ್ಚ್‌ವರೆಗೆ ಅವುಗಳು ಇರಲಿ,ಮುಂದೆ ಈ ನಾಡ ಕಛೇರಿಗಳ ಕೆಲಸವನ್ನು ನೋಡಿ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದಕ್ಕಾಗಿ ಅದು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೇವೆ.

ಶ್ರೀ ಟಿ.ಬಿ.ಚಿಯಚಂದ್ರ : ಸೈಕ್ಲೋಸ್ಟೇಲ್ ಪ್ರತಿ ನನ್ನ ಬಳಿಯೂ ಬಂದಿತ್ತು, ನಾನು ಅದಕ್ಕೆ ಸಹಿ ಮಾಡಲಿಲ್ಲ, ಈ ನಾಡ ಕಛೇರಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಪ್ರೊಮೇಷನ್ ಕೊಟ್ಟು ಎಲ್ಲಿಗೆ ಹಾಕಬೇಕು ಎಂಬುದನ್ನು ಯಾರೋ ಕೆಲವು ಅಧಿಕಾರಿಗಳು ಒತ್ತಾಯ ತಂದು ಆ ರೀತಿ ಕಾಗದ ಬರೆದಿದ್ದಾರೆ. ಅದನ್ನು ನಂಬಬೇಡಿ, ಅದಕ್ಕೆ ಯಾವುದೇ ರೀತಿಯ ಮಾನ್ಯತೆಯನ್ನು ಕೊಡಬಾರದು. ಅವರು ಮಾಡುತ್ತಿರುವ ಉದ್ದೇಶ ಬೇರೆಯಾಗಿದೆ, ನಾಡ ಕಛೇರಿಗಳನ್ನು ಇಟ್ಟುಕೊಳ್ಳಬೇಕು ಎನ್ನುವುದರಲ್ಲಿ ಅರ್ಥವಿಲ್ಲ.

(ಉತ್ತರ ಇಲ್ಲ)

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ

1304 - ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು?

ಆ) ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು?

ಇ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ಅಭ್ಯರ್ಥಿಗಳ ಒಟ್ಟು ಸಂಖ್ಯೆ ಎಷ್ಟು ?

ಈ) ಈ ಮೇಲ್ಕಂಡ ಉದ್ಯೋಗ ವಿನಿಮಯ ಕೇಂದ್ರದಿಂದ ಸಂದರ್ಶನಗಳಿಗೆ ಕರೆ ಕಳುಹಿಸುವಾಗ ಅನುಸರಿಸುವ ನೀತಿ ನಿಯಮಗಳೇನು?

ಶ್ರೀ ಸಿ.ಎಸ್. ನಾಡಗೌಡ (ಅಫ್ಜಲ್‌ಪುರ) (ಕಾರ್ಮಿಕ ರಾಜ್ಯ ಸಚಿವರು):